**ಕರ್ನಾಟಕ ಸರ್ಕಾರ : ಕಾರ್ಮಿಕ ಇಲಾಖೆ**

ಸಂ.ಪಿ&ಎಸ್/ಎನ್ಎಫ್ಹೆಚ್/ಸಿಆರ್–1/2018–19

ಕಾರ್ಮಿಕ ಆಯುಕ್ತರ ಕಚೇರಿ
'ಕಾರ್ಮಿಕ ಭವನ' ಬನ್ನೇರುಘಟ್ಟ ರಸ್ತೆ
ಬೆಂಗಳೂರು–29 – ದಿನಾಂಕ–13.04.2018

**ಸುತ್ತೋಲೆ**

**ವಿಷಯ:** ದಿನಾಂಕ 12.05.2018 ರಂದು ಕರ್ನಾಟಕ ವಿಧಾನ ಸಭಾ ಚುನಾವಣೆಯ ದಿನದಂದು ಬೆಂಗಳೂರಿನ ಕಾರ್ಮಿಕರು ಮತ ಚಲಾಯಿಸಲು ಅನುವು ಮಾಡಿಕೊಡುವ ಬಗ್ಗೆ

**ಉಲ್ಲೇಖ:** ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಟಿಪ್ಪಣಿ ನಂ.ಮುಕಾ/3834/2018 ದಿನಾಂಕ 12.04.2018

= = =

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ತಮ್ಮ ಉಲ್ಲೇಖಿತ ಟಿಪ್ಪಣಿಯಲ್ಲಿ ದಿನಾಂಕ 12.05.2018 ರಂದು ಘೋಷಿಸಲಾಗಿರುವ ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಬಹುತೇಕ ಕಾರ್ಮಿಕರು ಬೆಂಗಳೂರಿನ ವಿವಿಧ ಮಾಲ್‌ಗಳಲ್ಲಿ ಹಾಗೂ ಮನರಂಜನಾ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಅವರುಗಳು ಮತದಾನ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವಂತೆ ಉತ್ತೇಜಿಸಲು ಕೈಗೊಳ್ಳಬಹುದಾದ ಪರಿಹಾರಗಳ ಬಗ್ಗೆ ಪರಿಶೀಲಿಸಲು ತಿಳಿಸಿರುತ್ತಾರೆ. (ಪ್ರತಿ ಲಗತ್ತಿಸಿದೆ)

ಆದ್ದರಿಂದ 1963 ರ ಕರ್ನಾಟಕ ಔದ್ಯೋಗಿಕ ಸಂಸ್ಥೆಗಳ (ರಾಷ್ಟ್ರೀಯ ಮತ್ತು ಹಬ್ಬದ ರಜಾ ದಿನಗಳು) ಕಾಯ್ದೆಯಡಿ ಮತ ಚಲಾಯಿಸಲು ಇರುವ ಪ್ರಾವದಾನಗಳ ಬಗ್ಗೆ ತಮ್ಮ ಕಾರ್ಯವ್ಯಾಪ್ತಿಯಲ್ಲಿರುವ ವಿವಿಧ ಮಾಲ್‌ಗಳಲ್ಲಿ ಹಾಗೂ ಮನರಂಜನಾ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರಿಗೆ ಮನವರಿಕೆ ಮಾಡಿಕೊಟ್ಟು ಕಡ್ಡಾಯವಾಗಿ ಮತ ಚಲಾಯಿಸಲು ಹಾಗೂ ಸಂಬಂಧಿತ ಮಾಲೀಕರಿಗೆ / ಆಡಳಿತವರ್ಗದವರಿಗೂ ಸಹ ಈ ಬಗ್ಗೆ ತಿಳಿಸಿ ಕಾರ್ಮಿಕರು ಮತ ಚಲಾಯಿಸಲು ಅನುವು ಮಾಡಿಕೊಡುವಂತೆ ಕ್ರಮಕೈಗೊಳ್ಳಲು ಈ ಮೂಲಕ ಸೂಚಿಸಿದೆ.

ಆಯುಕ್ತರು
ಕಾರ್ಮಿಕ ಇಲಾಖೆ

**ಗೆ:**

ಕಾರ್ಮಿಕ ಅಧಿಕಾರಿಗಳು ಉಪ ವಿಭಾಗ – 1, 2, 3, 4, 5 & 6 ಬೆಂಗಳೂರು

**ಪ್ರತಿಯನ್ನು ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ :–**

1. ಉಪ ಕಾರ್ಮಿಕ ಆಯುಕ್ತರು ಪ್ರಾದೇಶಿಕ – 1 & 2 ಬೆಂಗಳೂರು
2. ಸಹಾಯಕ ಕಾರ್ಮಿಕ ಆಯುಕ್ತರು ವಿಭಾಗ –1, 2, 3 & 4 ಬೆಂಗಳೂರು

Scanned by CamScanner